**ದಿಃ 14-06-2022 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಜನವರಿ 4. 2008 ರಲ್ಲಿ ಉಪನ್ಯಾಸಕ ವೃತ್ತಿಯಿಂದ ನಿವೃತ್ತಿ ಹೊಂದಿದ್ದೇನೆ. ನನ್ನ ತಂದೆ ದಿಃ 06.04.1999 ರಲ್ಲಿ ಮೃತ ಪಟ್ಟಿದ್ದಾರೆ . ನನ್ನ ತಂದೆ ಮೃತ ಪಟ್ಟಾಗ ನಾನು ಎಸ್ .ಜೆ. ಎಂ ಕಾಲೇಜ್ ಚಿತ್ರದುರ್ಗದಲ್ಲಿ ಕೆಲಸ ಮಾಡುತ್ತಿದ್ದೆ ನನ್ನ ತಾಯಿ 2006 ರಲ್ಲಿ ತೀರಿಕೊಂಡಿದ್ದಾರೆ. ವಾದಿ ಕೆಂಚಮ್ಮ ನನ್ನ 3 ನೇ ತಂಗಿ ನನಗೆ ಇಬ್ಬರು ಸಹೋದರಿಯರು ಒಬ್ಬರು ಅಕ್ಕ ಕೂಡ ಇರುತ್ತಾರೆ. 2 ನೇ ಪ್ರತಿವಾದಿ ನನ್ನ ಅಕ್ಕ , ನಾನು 2 ನೇ ಪ್ರತಿವಾದಿ ಮಗಳಾದ ಪಾರ್ವತಮ್ಮನನ್ನು ಮದುವೆಯಾಗಿದ್ದೇನೆ. ನಾನು ನನ್ನ ಪತ್ನಿ ಹಾಗೂ 2 ನೇ ಪ್ರತಿವಾದಿ ಸಿದ್ದಮ್ಮ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ .

1978 ರಲ್ಲಿ ನನ್ನ ತಂಗಿ ಕೆಂಚಮ್ಮ ಮದುವೆಯಾಗಿದ್ದಾರೆ . ಇವರು ಮದುವೆಯಾಗುವ ಕಾಲಕ್ಕೆ ನಮ್ಮ ತಂದೆ ತಾಯಿಯರು ಬದುಕಿದ್ದರು. ಈ ದಾವಾ ಸ್ವತ್ತುಗಳನ್ನು ಕೆಂಚಮ್ಮನವರ ಮದುವೆಯ ಕಾಲಕ್ಕೆ ಮದುವೆಯ ಸಂದರ್ಬದಲ್ಲಿ ನನ್ನ ತಂದೆ ತಾಯಿ ಮತ್ತು ನನ್ನ ಅಕ್ಕ ತಂಗಿಯರು ನಾವೆಲ್ಲಾ ಸಾಮೂಹಿಕವಾಗಿ ಅನುಬವಿಸುತ್ತಿದ್ದೆವು ಎಂದರೆ ಸರಿಯಲ್ಲ . ನನ್ನ ಅಕ್ಕ ಆ ಸಂದರ್ಬದಲ್ಲಿ ಬೇರೆ ಇದ್ದರು ಅಂದರೆ ಅವರು ಗಂಡನ ಮನೆಯಲ್ಲಿದ್ದರು ಆದರೆ ನಮ್ಮಿಂದ ಬಾಗ ಮಾಡಿಕೊಂಡು ಹೊರಗೆ ಹೋಗಿಲ್ಲ. ಕೆಂಚಮ್ಮ ಕೂಡ ಬಾಗ ಮಾಡಿಕೊಂಡು ತನ್ನ ಗಂಡನ ಮನೆಗೆ ಹೋಗಿಲ್ಲ ಎಂದರೆ ಸರಿ . ಕೆಂಚಮ್ಮನು ಮದುವೆಗೆ ಮುಂಚೆ ನಾವೆಲ್ಲರೂ ದಾವಾ ಆಸ್ತಿಗಳಲ್ಲಿ ಬರುವ ಆದಾಯ ಪಡೆದುಕೊಂಡು ಒಟ್ಟಾಗಿ ಅನುಬವಿಸುತ್ತಿದ್ದೆವು ಎಂದರೆ ಸರಿ , 2 ನೇ ಪ್ರತಿವಾದಿ ಅಕ್ಕ ಹೊರತುಪಡಿಸಿ ನಾವೆಲ್ಲರೂ ಒಟ್ಟಿಗೆ ಇದ್ದೆವು ಎಂದು ನುಡಿಯುತ್ತಾರೆ.

ದಾವಾ ಷೆಡ್ಯೂಲ ಎಲ್ಲಾ ಸ್ವತ್ತುಗಳು ವಾದಿ ಮತ್ತು ನಮ್ಮ ಹಾಗೂ ಉಳಿದ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ನನ್ನ ಅಕ್ಕನ ಆಸ್ತಿ ಹೊರತುಪಡಿಸಿ ನಮ್ಮ ತಂದಗೆ ಸೇರಿದ ಆಸ್ತಿಗಳು ಮಾತ್ರ ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿಯುತ್ತಾರೆ 2 ನೇ

ಪ್ರತಿವಾದಿ ನನ್ನ ಅಕ್ಕನಿಗೆ ನನ್ನ ತಂದೆಯ ಸ್ವತ್ತಿನಲ್ಲಿ ಬಾಗ ಕೊಟ್ಟು ಹೊರಗೆ ಕಳುಹಿಸಿಲ್ಲ. ಅದೇರೀತಿ ಕೆಂಚಮ್ಮನಿಗೂ ಬಾಗಕೊಟ್ಟು ಹೊರಗೆ ಕಳುಹಿಸಿಲ್ಲ. ಆಗಾಗಿ ವಾದಿ ಕೆಂಚಮ್ಮನಿಗೂ ಹಾಗೂ ನನ್ನ ಅಕ್ಕ ಸಿದ್ದಮ್ಮನಿಗೂ ಸಹ ನನ್ನ ತಂದೆಯ ಆಸ್ತಿಗಳಲ್ಲಿ ನಮ್ಮಷ್ಟೆ ಹಕ್ಕುದಾರರಾಗಿರುತ್ತಾರೆ ಎಂದರೆ ಸರಿ .

2 ನೇ ಪ್ರತಿವಾದಿಗೆ ಮದುವೆ ಮಾಡುವ ಕಾಲಕ್ಕೆ ನಮ್ಮ ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ಬಂದಂತಹ ಉತ್ಪನ್ನಗಳಿಂದಲೇ ಆಕೆಗೆ ಮದುವೆ ಮಾಡಿಸಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ . ನನ್ನ ಸ್ವಯಾರ್ಜಿತ ಸ್ವತ್ತುಗಳು ಎಂದು ಹೇಳಿದ್ದು ಅವು ಯಾವುವು ನನ್ನ ಸ್ವಯಾರ್ಜಿತ ಸ್ವತ್ತುಗಳಲ್ಲ ಅವು ವಾದಿ ಮತ್ತು ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ಗಳಿಸಿದವು ಎಂದರೆ ಸರಿಯಲ್ಲ. ನನ್ನ ತಂದೆಯವರಾಗಲಿ ತಾಯಿಯವರಾಗಲಿ ವಿಬಾಗ ಪತ್ರ ಮಾಡಿಕೊಟ್ಟಿದ್ದಲ್ಲಿ ನೊಂದಣಿ ಪತ್ರ ಆಗಿದ್ದು ಖಾತೆ ಕೂಡ ವರ್ಗಾವಣೆ ಆಗಬೇಕಾಗಿತ್ತು ಆ ರೀತಿ ಆಗಿಲ್ಲವಾದ್ದರಿಂದ ವಿಬಾಗ ಆಗಿಲ್ಲ ಎಂದರೆ ಸರಿ . ಆ ರೀತಿ ವಿಬಾಗ ಆಗದೇ ಇರುವ ಕಾರಣದಿಂದ ದಾವಾ ಷೆಡ್ಯೂಲ್ ನ ಎಲ್ಲಾ ಸ್ವತ್ತುಗಳು ನನ್ನ ಮತ್ತು ವಾದಿ ಮತ್ತು ಉಳಿದ ಪ್ರತಿವಾದಿಗಳ ಪಿತ್ರಾರ್ಜಿತ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ನನ್ನ ಅಕ್ಕನ ಆಸ್ತಿ ಹೊರತುಪಡಿಸಿ ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿ ನಂದಕುಮಾರ ನನ್ನ ಮಗನಾಗಬೇಕು. ಈತ ಬೆಂಗಳೂರಿನಲ್ಲಿ ಎಂಬಿಎ ವ್ಯಾಸಂಗ ಮಾಡುತ್ತಿದ್ದಾನೆ. ಆತನಿಗೆ ನನ್ನ ಅಕ್ಕ 2 ನೇ ಪ್ರತಿವಾದಿ ಸಿದ್ದಮ್ಮ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿ . ಸದರಿ ಆಸ್ತಿಯು ನನ್ನ ಅಕ್ಕನ ಸ್ವಂತ ಆದಾಯದಿಂದ ಗಳಿಸಿದ ಆಸ್ತಿಯಾಗಿತ್ತು . ಸದರಿ ಸ್ವತ್ತು 2 ನೇ ಪ್ರತಿವಾದಿ ಸಿದ್ದಮ್ಮನ ಗಂಡನ ಮನೆ ಕಡೆಯ ಆಸ್ತಿಯಾಗಿರುತ್ತದೆ. ಆ ಬಗ್ಗೆ ಪಹಣಿ ಗಂಡನ ಮನೆಯ ಪಾರಿಕತ್ತು ಕೊಟ್ಟಿದ್ದೇವೆ. ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸಿದ್ದಮ್ಮನಿಗೆ 3 ಜನ ಮಕ್ಕಳು . 2 ನೇ ಪ್ರತಿವಾದಿಯ ಮಗಳನ್ನು ಮದುವೆ ಆಗುವ ಕಾಲಕ್ಕೆ ನನ್ನ ತಂದೆ ತಾಯಿಯರು ಬದುಕಿದ್ದರು. ಮದುವೆಯ ಕಾಲಕ್ಕೆ ಖರ್ಚು ವೆಚ್ಚಗಳನ್ನು ನಾನೇ ಸ್ವತಃ ಬರಿಸಿರುತ್ತೇನೆ. ಆ ಕಾಲಕ್ಕೆ ಎಸ್ ಜೆ. ಎಂ ಕಾಲೇಜ್ ನಲ್ಲಿ ಉಪನ್ಯಾಸಕ ವೃತ್ತಿ ಮಾಡುತ್ತಿದ್ದೆ. ಆ ಕಾಲಕ್ಕೆ

2 ನೇ ಪ್ರತಿವಾದಿ ಸಿದ್ದಮ್ಮ ಗಂಡನ ಮನೆಯಲ್ಲಿದ್ದರು.

ವಾದಿ ಕೆಂಚಮ್ಮನಿಗೆ 2 ಗಂಡು 1 ಹೆಣ್ಣು ಮಕ್ಕಳು ಇದ್ದಾರೆ. ಅವರ ಮಕ್ಕಳು ಯಾರ ಜೊತೆ ವಾಸವಾಗಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಆಸ್ತಿ 1 ರಿಂದ 10 , 13 ಮತ್ತು 14 ಇವುಗಳ ಕಂದಾಯ ನಾವೆ ಕಟ್ಟುತ್ತೇವೆ ಸಾಕ್ಷಿಯು ಮುಂದುವರೆದು ನಮಗೆ ಸಂಬಂದ ಪಟ್ಟ ಆಸ್ತಿಗಳಿಗೆ ನಾವು ಕಟ್ಟುತ್ತೇವೆ ನನ್ನ ಅಕ್ಕನಿಗೆ ಸಂಬಂದ ಪಟ್ಟ ಆಸ್ತಿಗಳಿಗೆ ಅವರು ಕಟ್ಟುತ್ತಾರೆ. 2 ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ಐಟಂ ನಂ.12 ನ್ನು ದಾನ ಪತ್ರ ಮೂಲಕ 3 ನೇ ಪ್ರತಿವಾದಿಗೆ ಮಾಡಿಕೊಡಲು ಯಾವುದೇ ಹಕ್ಕು ಅದಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ನಮ್ಮ ಮತ್ತು ವಾದಿಯರ ಒಟ್ಟು ಕುಟುಂಬದ ಆಸ್ತಿಯಾಗಿದೆ ಎನ್ನುವುದು ಸರಿಯಲ್ಲ. ನನ್ನ ಅಕ್ಕ ನಿಗೆ ಸದರಿ ಆಸ್ತಿಯು ಸೇರಿದೆ ಎಂದು ಹೇಳಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ಸರ್ವೆ ನಂ.101 ಮತ್ತು 102 ರಲ್ಲಿನ ಸ್ವತ್ತುಗಳಲ್ಲಿ ಅಡಿಕೆ ಮರಗಳು ಪಸಲು ಬಿಡುತ್ತಿವೆ ಎಂದರೆ ಸರಿ ಅವುಗಳನ್ನು 1986 ರಲ್ಲಿ ಹಾಕಲಾಗಿದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಈ ಎರಡು ಆಸ್ತಿಗಳು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು ಅವುಗಳನ್ನು ಒಟ್ಟು ಕುಟುಂಬದ ಆದಾಯದಿಂದ ನಂತರದಲ್ಲಿ ಗಳಿಸಿದ ಆಸ್ತಿಗಳಾಗಿಲ್ಲ. ಸರ್ವೆ ನಂಬರ್ 94/2 ರಲ್ಲಿನ 7 ಎಕರೆ 30 ಗುಂಟೆ ಸ್ವತ್ತನ್ನು 13.1.1997 ರಂದು ಹೊರಕೆರಪ್ಪ ಜಿ.ಎಸ್ ರಾಮಕೃಷ್ಣಪ್ಪ ಎಂಬುವರಿಂದ ಇದನ್ನು ಶುದ್ಧ ಕ್ರಯಕ್ಕೆ ಒಟ್ಟು ಕುಟುಂಬಕ್ಕೆ ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. ಅದು 2 ನೇ ಪ್ರತಿವಾದಿ ಹೆಸರಿಗೆ ಸದರಿ ದಾವಾ ಷೆಡ್ಯೂಲ್ 12 ನೇ ಐಟಂ ಆಸ್ತಿಯನ್ನು 1 ನೇ ಪ್ರತಿವಾದಿಯ 2 ನೇ ಪ್ರತಿವಾದಿ ಹೆಸರಿಗೆ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಲಾಗಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ